All India Radio: Bangalore
National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

12.11.2025 19.35 p.m.

***************

ಮುಖ್ಯಾಂಶಗಳು

- ದೆಹಲಿ ಕಾರು ಸ್ಫೋಟದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಿದ ಪ್ರಧಾನಿ ನರೇಂದ್ರ ಮೋದಿ; ಶೀಘ್ರ ಚೇತರಿಕೆಗೆ ಹಾರೈಕೆ
- ರಾಷ್ಟ್ರಪತಿ ದ್ರೌಪದಿ ಮುರ್ಮು ಬೋಟ್ಸ್ವಾನಾ ಪ್ರವಾಸ; ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಎರಡು ತಿಳುವಳಿಕಾ ಪತ್ರಕ್ಕೆ ಸಹಿ
- ೪೮೫ ಕೋಟಿ ರೂಪಾಯಿ ಹೂಡಿಕೆಯೊಂದಿಗೆ ದೇಶಾದ್ಯಂತ ನಾಲ್ಕು ಹೈಡ್ರೋಜನ್ ವ್ಯಾಲಿ ಅಭಿವೃದ್ಧಿ - ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್
- ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್; ರಿಕರ್ವ್ ಮತ್ತು ಕಾಂಪೌಂಡ್ ವಿಭಾಗದಲ್ಲಿ ಎರಡು ಪದಕ ಖಚಿತಪಡಿಸಿಕೊಂಡ ಭಾರತ

***************

ಕಳೆದ ಸೋಮವಾರ ರಾಷ್ಟ್ರ ರಾಜಧಾನಿಯಲ್ಲಿ ಸಂಭವಿಸಿದ ಕಾರು ಸ್ಫೋಟದಲ್ಲಿ ಗಾಯಗೊಂಡವರನ್ನು ಭೇಟಿ ಮಾಡಲು ಪ್ರಧಾನಿ ನರೇಂದ್ರ ಮೋದಿ ಇಂದು ಲೋಕನಾಯಕ್ ಜಯಪ್ರಕಾಶ್ ನಾರಾಯಣ್ ಆಸ್ಪತ್ರೆಗೆ ಭೇಟಿ ನೀಡಿದರು.

ಎರಡು ದಿನಗಳ ಭೂತಾನ್ ಭೇಟಿ ಸಂಪನ್ನಗೊಳಿಸಿ ಇಂದು ದೆಹಲಿಗೆ ಬಂದಿಳಿದ ಮರುಕ್ಷಣವೇ ಪ್ರಧಾನಿ ಆಸ್ಪತ್ರೆಗೆ ತೆರಳಿದರು. ಗಾಯಾಳುಗಳೊಂದಿಗೆ ಪ್ರಧಾನಿ ಸಂವಾದ ನಡೆಸಿ, ಅವರ ಶೀಘ್ರ ಚೇತರಿಕೆಗೆ ಹಾರೈಸಿದರು.

ಈ ವೇಳೆ, ಅಧಿಕಾರಿಗಳು ಹಾಗೂ ವೈದ್ಯರು ಪ್ರಸ್ತುತ ಪರಿಸ್ಥಿತಿಯ ಕುರಿತು ಮಾಹಿತಿ ಹಂಚಿಕೊಂಡರು. ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ಈ ಷಡ್ಯಂತರ ಹಿಂದಿನ ಆರೋಪಿಗಳನ್ನು ನ್ಯಾಯದ ಕಟ್ಟಕಟೆಗೆ ತರಲಾಗುವುದು ಎಂದಿದ್ದಾರೆ.

ಘಟನೆ ನಡೆದು ಎರಡು ದಿನಗಳ ನಂತರ ಭಯೋತ್ಪಾದಕ ಜಾಲದ ಭಾಗವಾಗಿದೆ ಎಂದು ಶಂಕಿಸಲಾಗಿರುವ ಕೆಂಪು ಬಣ್ಣದ ಕಾರಿನ ಹುಡುಕಾಟದಲ್ಲಿ ದೆಹಲಿ ಪೊಲೀಸರು ಇದ್ದಾರೆ ಎಂದು ಐಎಎನ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇದಕ್ಕೂ ಮುನ್ನ ಇಂದು ಬೆಳಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ ಎನ್ಐಎ ಸ್ಫೋಟದ ತನಿಖೆ ನಡೆಸಲು ೧೦ ಅಧಿಕಾರಿಗಳ ವಿಶೇಷ ತಂಡವನ್ನು ರಚಿಸಿದೆ. ಒಂದು ಸಾವಿರಕ್ಕೂ ಅಧಿಕ ಸಿಸಿಟಿವಿ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ದೆಹಲಿ, ಉತ್ತರ ಪ್ರದೇಶ, ಬಿಹಾರ ಮತ್ತು ಮುಂಬೈಯಾದ್ಯಂತ ಹೈಅಲರ್ಟ್ ಘೋಷಿಸಲಾಗಿದ್ದು, ಜನನಿಬಿಡ ಸಾರ್ವಜನಿಕ ಪ್ರದೇಶಗಳು ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

****************

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಗ್ಯಾಬೊರೊನ್‌ನಲ್ಲಿ ಬೊಟ್ಸ್‌ವಾನಾ ಅಧ್ಯಕ್ಷ ಡುಮಾ ಬೊಕೊ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಸಹಕಾರಕ್ಕೆ ಸಂಬಂಧಿಸಿದ ಎರಡು ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಸಭೆಯಲ್ಲಿ ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಕುರಿತು ಚರ್ಚೆ ನಡೆಸಿದರು.

ಇದೇ ವೇಳೆ ಬೋಟ್ಸ್‌ವಾನಾಗೆ ಆಂಟಿರೆಟ್ರೊ ವೈರಲ್ ಔಷಧಿಗಳನ್ನು ಭಾರತ ಕಳುಹಿಸಲಿದೆ ಎಂದು ರಾಷ್ಟ್ರಪತಿ ಘೋಷಿಸಿದರು. ಈ ವೇಳೆ ಬೋಟ್ಸ್‌ವಾನಾ ಅಧ್ಯಕ್ಷರು, ಭಾರತ ಜನರಿಕ್ ಔಷಧಿಗಳ ಪ್ರಮುಖ ತಯಾರಕರ ರಾಷ್ಟ್ರವಾಗಿದ್ದು, ಸಹಿ ಹಾಕಲಾದ ತಿಳುವಳಿಕಾ ಒಪ್ಪಂದ ಕೈಗೆಟಕುವ ಗುಣಮಟ್ಟದ ಔಷಧಗಳಿಗೆ ಪ್ರವೇಶ ಪಡೆಯಲು ಬೊಟ್ಸ್‌ವಾನಾಗೆ ಸಹಕಾರಿಯಾಗಲಿದೆ ಎಂದಿದ್ದಾರೆ.

ಇದರ ಜೊತೆಗೆ ವಿಶೇಷವಾಗಿ 'ಪ್ರಾಜೆಕ್ಟ್ ಚೀತಾ ಅಡಿಯಲ್ಲಿ' ಬೊಟ್ಸ್‌ವಾನಾ, ಭಾರತಕ್ಕೆ ೮ ಚೀತಾಗಳನ್ನು ಉಡುಗೊರೆಯಾಗಿ ನೀಡುವ ಕುರಿತು ಘೋಷಿಸಲಾಯಿತು. ರಾಷ್ಟ್ರಪತಿಗಳ ಭೇಟಿಯ ಸಮಯದಲ್ಲಿ ಚೀತಾಗಳನ್ನು ಕ್ವಾರನ್‌ಟೈನ್‌ಗೆ ಬಿಡುವ ಮೂಲಕ ನಾಳೆ ಸಾಂಕೇತಿಕವಾಗಿ ಬೋಟ್ಸ್‌ವಾನಾ ಚೀತಾಗಳನ್ನು ಭಾರತಕ್ಕೆ ನೀಡುವ ಕಾರ್ಯಕ್ರಮವಿದೆ.

ರಾಷ್ಟ್ರಪತಿ ಮುರ್ಮು ಬೋಟ್ಸ್‌ವಾನಾ ಸಂಸದರನ್ನು ಉದ್ದೇಶಿಸಿ ಮಾತನಾಡಲಿದ್ದು, ಬಳಿಕ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಇದರ ಜೊತೆಗೆ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಪಡೆದಿರುವ ಸ್ಥಳಗಳಿಗೆ ಅವರು ಭೇಟಿ ನೀಡಲಿದ್ದಾರೆ.

ಅಂಗೋಲಾ ಪ್ರವಾಸ ಕೊನೆಗೊಳಿಸಿ ರಾಷ್ಟ್ರಪತಿ ನಿನ್ನೆ ಬೋಟ್ಸ್‌ವಾನಾದ ರಾಜಧಾನಿಗೆ ಆಗಮಿಸಿದರು. ಈ ವೇಳೆ ಅವರಿಗೆ ಗೌರವ ರಕ್ಷೆ ಮೂಲಕ ಸ್ವಾಗತ ಕೋರಲಾಯಿತು. ಎರಡು ಆಫ್ರಿಕನ್ ರಾಷ್ಟ್ರಗಳಿಗೆ ಭಾರತೀಯ ರಾಷ್ಟ್ರಪತಿಯೊಬ್ಬರು ನೀಡುತ್ತಿರುವ ಮೊದಲ ಭೇಟಿ ಇದಾಗಿದೆ.

****************

ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ನವದೆಹಲಿಯಲ್ಲಿಂದು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಪಾಲುದಾರರೊಂದಿಗೆ ಮೂರನೇ ಬಜೆಟ್ ಪೂರ್ವ ಸಮಾಲೋಚನೆಯ ಅಧ್ಯಕ್ಷತೆ ವಹಿಸಿದ್ದರು.

ಮುಂಬರುವ ಕೇಂದ್ರ ಬಜೆಟ್‌ಗೆ ಸಂಬಂಧಿಸಿದಂತೆ ಈ ಸಭೆ ನಡೆಸಲಾಗಿದೆ ಎಂದು ಹಣಕಾಸು ಸಚಿವಾಲಯ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

ಸಭೆಯಲ್ಲಿ ಕೇಂದ್ರ ಹಣಕಾಸು ರಾಜ್ಯ ಸಚಿವ ಪಂಕಜ್ ಚೌಧರಿ ಮತ್ತು ಎಂಎಸ್‌ಎಂಇ ಸಚಿವಾಲಯದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

****************

ಕೃಷಿ ಭಾರತದ ನಾಗರಿಕತೆಯ ಅಡಿಪಾಯವಾಗಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಸಸ್ಯ ತಳಿಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರದ ೨೧ನೇ ಸಂಸ್ಥಾಪನಾ ದಿನವನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಶ್ಚಿಮಾತ್ಯ ರಾಷ್ಟ್ರಗಳ ಉದಯಕ್ಕೂ ಮುನ್ನವೇ ಭಾರತ ತನ್ನದೇ ಆದ ಬೀಜಗಳನ್ನು ಅಭಿವೃದ್ಧಿಪಡಿಸಿದ್ದು, ಸಸ್ಯ ತಳಿಗಳ ರಕ್ಷಣೆಗಾಗಿ ಕಾನೂನು ಜಾರಿಗೆ ತಂದ ವಿಶ್ವದ ಮೊದಲ ರಾಷ್ಟ್ರ ಭಾರತ ಎಂದು ಹೇಳಿದರು.

ಬೀಜಗಳ ಸಂರಕ್ಷಣೆಗಾಗಿ ಸರ್ಕಾರ ೧೫ ಲಕ್ಷ ರೂಪಾಯಿಗಳ ನಿಬಂಧನೆಯನ್ನು ಹೊಂದಿದೆ. ಇದರಿಂದ ರೈತರು ವಿವಿಧ ಬಗೆಯ ಬೀಜಗಳನ್ನು ಸಂರಕ್ಷಿಸಲು ಅಗತ್ಯ ಮೂಲಸೌಕರ್ಯಗಳನ್ನು ಸ್ಥಾಪಿಸಬಹುದು. ದೇಶದಲ್ಲಿ ೩೦ ಸಾವಿರಕ್ಕೂ ಬಗೆಯ ಭತ್ತದ ತಳಿಗಳಿವೆ ಎಂದರು.

****************

ದೇಶಾದ್ಯಂತ ಒಟ್ಟು ೪೮೫ ಕೋಟಿ ರೂಪಾಯಿ ಹೂಡಿಕೆಯೊಂದಿಗೆ ನಾಲ್ಕು ಹೈಡ್ರೋಜನ್ ವ್ಯಾಲಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಹಸಿರು ಹೈಡ್ರೋಜನ್ ಕುರಿತ ಮೂರನೇ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತ ಸ್ವಾವಲಂಬಿ ಹೈಡ್ರೋಜನ್ ಆರ್ಥಿಕತೆಗೆ ಜಾಗತಿಕ ಪರಿವರ್ತನೆಯ ಭಾಗವಾಗಿದೆ. ಶುದ್ಧ ಇಂಧನ ಪರಿಸರ ಆಯ್ಕೆಯ ವಿಷಯವಾಗಿ ಉಳಿಯದೆ ರಾಷ್ಟ್ರದ ಬೆಳವಣಿಗೆಗೆ ಆರ್ಥಿಕ, ತಾಂತ್ರಿಕ ಮತ್ತು ಕಾರ್ಯತಂತ್ರದ ಅಗತ್ಯವಾಗಿದೆ ಎಂದು ಹೇಳಿದರು.

ಒಂದು ಲಕ್ಷ ಕೋಟಿ ರೂಪಾಯಿಗಳ ನಿಧಿಯೊಂದಿಗೆ ಇತ್ತೀಚೆಗೆ ಪ್ರಾರಂಭಿಸಲಾದ ಅಭಿವೃದ್ಧಿ ಮತ್ತು ನಾವೀನ್ಯತೆ ಯೋಜನೆ ಡೀಪ್ ಟೆಕ್ ಮತ್ತು ಶುದ್ಧ ಇಂಧನ ನಾವೀನ್ಯತೆಯನ್ನು ವೇಗಗೊಳಿಸುತ್ತದೆ ಎಂದು ಸಚಿವರು ತಿಳಿಸಿದರು.

***************

ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯದ ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ವಾಯು ಮಾಲಿನ್ಯ ಕುರಿತ ನವೀಕರಿಸಿದ ಆರೋಗ್ಯ ಮಾರ್ಗಸೂಚಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇಂದು ಬಿಡುಗಡೆ ಮಾಡಿದೆ.

ನಗರ ಪ್ರದೇಶಗಳಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಹೃದ್ರೋಗ ಚಿಕಿತ್ಸಾಲಯಗಳ ಸ್ಥಾಪನೆಗೆ ಮಾರ್ಗಸೂಚಿ ಕರೆ ನೀಡಿದೆ.

ವಾಯು ಮಾಲಿನ್ಯ ಗರಿಷ್ಠ ಮಟ್ಟಕ್ಕೆ ಏರುವ ತಿಂಗಳುಗಳಲ್ಲಿ ಈ ಚಿಕಿತ್ಸಾಲಯಗಳು ಕನಿಷ್ಠ ಎರಡು ಗಂಟೆಗಳ ಕಾಲ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ.

***************

ನವದೆಹಲಿಯಲ್ಲಿಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಸೌಧಿ ಅರೇಬಿಯಾದ ಹೂಡಿಕೆ ಸಚಿವ ಖಾಲಿದ್ ಎ-ಅಲ್‌ಫಲಿಹ್ ಮತ್ತು ಅವರ ನಿಯೋಗವನ್ನು ಭೇಟಿಯಾದರು.

ಸಾಮಾಜಿಕ ಜಾಲತಾಣದಲ್ಲಿ ಸಚಿವರು, ಸಭೆಯ ವೇಳೆ ಭಾರತ-ಸೌಧಿ ಅರೇಬಿಯಾ ನಡುವಿನ ಆರ್ಥಿಕ ಸಂಬಂಧಗಳನ್ನು ಬಲಪಡಿಸುವ ಕುರಿತಂತೆ ಚರ್ಚೆ ನಡೆಸಲಾಗಿದೆ. ವಿಶೇಷವಾಗಿ ತಂತ್ರಜ್ಞಾನ, ಇಂಧನ, ಮೂಲಸೌಕರ್ಯ, ನವೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಾರ ಮತ್ತು ಹೂಡಿಕೆ ಹೆಚ್ಚಿಸುವ ಕುರಿತಂತೆ ಮಾತುಕತೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

***************

ವಿದೇಶಾಂಗ ಸಚಿವಾಲಯದ ಪಶ್ಚಿಮ ವಿಭಾಗದ ಕಾರ್ಯದರ್ಶಿ ಸಿಬಿ ಜಾರ್ಜ್ ನವದೆಹಲಿಯಲ್ಲಿಂದು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಆಡಳಿತಾಧಿಕಾರಿ ಹಾಲಿಯಾಂಗ್ ಕ್ಸು ಅವರನ್ನು ಭೇಟಿ ಮಾಡಿ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಡಿಜಿಟಲ್ ಪರಿವರ್ತನೆ ಸಾಧಿಸಲು ಸಹಯೋಗದ ಕುರಿತು ಚರ್ಚಿಸಿದರು.

***************

ನವದೆಹಲಿಯ ಆಕಾಶವಾಣಿ ಭವನದಲ್ಲಿಂದು ಸಾರ್ವಜನಿಕ ಸೇವಾ ಪ್ರಸಾರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಸಾರ ಭಾರತಿ ಅಧ್ಯಕ್ಷ ನವನೀತ್ ಕುಮಾರ್ ಸೆಹಗಲ್ ಪಾಲ್ಗೊಂಡರು.

ಈ ವೇಳೆ ಹಲವು ಕಲಾವಿದರು ಮಹಾತ್ಮಗಾಂಧಿ ಜಿ ಅವರ ಮೆಚ್ಚಿನ ಹಾಡುಗಳನ್ನು ಹಾಡು ಸಂಭ್ರಮಿಸಿದರು.

ಸಾರ್ವಜನಿಕ ಸೇವಾ ಪ್ರಸಾರ ದಿನವನ್ನು ಪ್ರತಿ ವರ್ಷ ನವೆಂಬರ್ ೧೨ ರಂದು ಆಚರಿಸಲಾಗುತ್ತದೆ. ಇದನ್ನು ರಾಷ್ಟ್ರಪಿತ ಮತ್ತು ಸ್ವಾತಂತ್ರ್ಯ ಹೋರಾಟಗಾರ ಮಹಾತ್ಮ ಗಾಂಧಿಯವರು ರೇಡಿಯೋ ಮೂಲಕ ಮಾಡಿದ ಐತಿಹಾಸಿಕ ಭಾಷಣವನ್ನು ಸ್ಮರಿಸಲಾಗುತ್ತದೆ.

****************

ಢಾಕಾದಲ್ಲಿ ನಡೆಯುತ್ತಿರುವ ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಎಲಿಮಿನೇಷನ್ ಹಂತದ ಕೊನೆಯ ದಿನವಾದ ಇಂದು ಭಾರತದ ಎರಡು ಪದಕಗಳನ್ನು ಖಚಿತಪಡಿಸಿಕೊಂಡಿದೆ.

ಕಂಪೌಂಡ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಅಭಿಷೇಕ್ ವರ್ಮ ಹಾಗೂ ದೀಪ್‌ಶಿಕಾ ಜೋಡಿ ಫೈನಲ್ ತಲುಪಿದ್ದು, ಚಿನ್ನದ ಪದಕಕ್ಕಾಗಿ ನಾಳೆ ಬಾಂಗ್ಲಾದೇಶದೊಂದಿಗೆ ಸೆಣಸಾಟ ನಡೆಸಲಿದ್ದಾರೆ.

ರಿಕರ್ವ್ ವಿಭಾಗದಲ್ಲಿ ಅನ್‌ಶಿಕಾ ಕುಮಾರಿ ಮತ್ತು ಯಶ್‌ದೀಪ್ ಭೋಗೆ ಜೋಡಿ ಕಂಚಿನ ಪದಕ ಪಂದ್ಯದಲ್ಲಿ ನಾಳೆ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ಭಾರತದ ಕಂಪೌಂಡ್ ತಂಡಗಳು ಪಂದ್ಯಾವಳಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿದ್ದು, ಎಲ್ಲ ಮೂರು ಕಂಪೌಂಡ್ ಫೈನಲ್ ಪಂದ್ಯಗಳಲ್ಲಿ ಸ್ಥಾನ ಪಡೆದಿವೆ.

****************

ನವದೆಹಲಿಯಲ್ಲಿ ಇದೇ ೧೪ ರಂದು ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರ ೨೦೨೫ ಅನ್ನು ಪ್ರದಾನ ಮಾಡಲಾಗುವುದು. ಮಕ್ಕಳ ಸಾಹಿತ್ಯ ವಿಭಾಗದ ಈ ವಾರ್ಷಿಕ ಪ್ರಶಸ್ತಿಗಳನ್ನು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್ ಪ್ರದಾನ ಮಾಡಲಿದ್ದಾರೆ.

*******ಮುಕ್ತಾಯ********